# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ದೂರವಾಣಿ ಕಛೇರಿ:0821-2417104
E-Mail: gmtech@cescmysore.org
website: www.cescmysore.org
CIN: U40109KA2004SGC035177

ನಿಗಮ ಕಾರ್ಯಾಲಯ
ತಾಂತ್ರಿಕ ಶಾಖೆ
ನಂ.29, ವಿಜಯನಗರ, 2ನೇ ಹಂತ
ಹಿನಕಲ್, ಮೈಸೂರು-570017.


---

ವಿಷಯ: ವಲಯ ವ್ಯಾಪ್ತಿಯಲ್ಲಿ **"High Value Consumers Monitoring Cell"** ಸ್ಥಾಪಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರು ಅಪರ ಮುಖ್ಯಕಾರ್ಯದರ್ಶಿಗಳು, ಇಂಧನ ಇಲಾಖೆ ರವರಿಗೆ ಬರೆದಿರುವ ಪತ್ರ ಸಂಖ್ಯೆ: ಸಿಐ/31/ಪಿಆರ್‌ಎಸ್/2020 ದಿ: 22.06.2020
2. ಅ.ಜ್ಞಾ: ಪ್ರವ್ಯ(ತಾ)/ಉಪ್ರವ್ಯ(ತಾ)/ಸಪ್ರವ್ಯ(ತಾ)-1/2020-21/ಸಿವೈಎಸ್-497 ದಿನಾಂಕ:22.07.2020.
3. ವ್ಯವಸ್ಥಾಪಕ ನಿರ್ದೇಶಕರು ರವರ ಅನುಮೋದಿತ ಟಿಪ್ಪಣಿ ದಿನಾಂಕ: 04.09.2020

**ಪೀಠಿಕೆ :**

- ಉಲ್ಲೇಖ (1) ರ ಪತ್ರದಲ್ಲಿ ಮಾನ್ಯ ಮಂತ್ರಿಗಳು, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ರವರು ಹಾರೋಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಭೇಟಿ ನೀಡಿದಾಗ ಅಲ್ಲಿನ ಕೈಗಾರಿಕಾ ಸಂಘದವರು, ಹಾರೋಹಳ್ಳಿ ಪ್ರದೇಶದಲ್ಲಿ ಗುಣಮಟ್ಟದ ವಿದ್ಯುತ್ ಸರಬರಾಜು ಹಾಗೂ ವಿದ್ಯುತ್ ಅಡಚಣೆಗೆ ಸಂಬಂಧಿಸಿದಂತೆ ದೂರು ಸಲ್ಲಿಸಿರುವ ಬಗ್ಗೆ ಸರ್ಕಾರದ ಪ್ರಧಾನಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರು ತಿಳಿಸಿರುತ್ತಾರೆ.
- ಇದೇ ರೀತಿ ನರಸಾಪುರ, ಕೋಲಾರ ಮತ್ತು ವಸಂತನರಸಾಪುರ ತುಮಕೂರು ಜಿಲ್ಲೆಗಳ ಕೈಗಾರಿಕಾ ಪ್ರದೇಶಕ್ಕೆ ಭೇಟಿ ನೀಡಿದಾಗಲೂ ಕೈಗಾರಿಕಾ ಗ್ರಾಹಕರು ವಿದ್ಯುತ್ ಅಡಚಣೆ ಬಗ್ಗೆ ದೂರು ನೀಡಿರುವ ಪ್ರಕರಣಗಳು ಕಂಡುಬಂದಿರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.
- ರಾಜ್ಯದಲ್ಲಿ ವಿದ್ಯುತ್ ಹೆಚ್ಚುವರಿಯಾಗಿದ್ದರೂ ಸಹ ವಿದ್ಯುತ್ ಅಡಚಣೆ ಹಾಗೂ ಗುಣಮಟ್ಟದ ವಿದ್ಯುತ್ ಸರಬರಾಜಗದೇ ಇರುವ ಕಾರಣ ವಿದ್ಯುತ್ ಬಳಕೆ ಕಡಿಮೆ/ನಿಶ್ಚಲವಾಗಿರುವುದು ಕಂಡುಬಂದಿರುತ್ತದೆ. ಈ ಕಾರಣಕ್ಕಾಗಿ ಹೆಚ್.ಟಿ. ಕೈಗಾರಿಕಾ ಗ್ರಾಹಕರ ವಿದ್ಯುತ್ ಬಳಕೆಯನ್ನು ಹಾಗೂ ವಿದ್ಯುತ್ ಅಡಚಣೆಯನ್ನು ಮೇಲ್ವಿಚಾರಣೆ ನಡೆಸಲು "High Value Consumers Monitoring Cell" ಸ್ಥಾಪಿಸುವ ಅಗತ್ಯತೆ ಬಗ್ಗೆ ತಿಳಿಸಿರುತ್ತಾರೆ.
- ಈ ಹಿನ್ನಲೆಯಲ್ಲಿ ನಿಗಮದ ವ್ಯಾಪ್ತಿಯಲ್ಲಿ ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಹೆಚ್.ಟಿ ಗ್ರಾಹಕರ ವಿದ್ಯುತ್ ಸರಬರಾಜು ಸಂಬಂಧಿತ ವಿಷಯಗಳನ್ನು ಮೇಲ್ವಿಚಾರಣೆ ನಡೆಸಲು "High Value Consumers Monitoring Cell" ಸ್ಥಾಪಿಸಲಾಗಿದ್ದು ಸದರಿ Monitoring Cell ಗೆ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಛೇರಿ, ಚಾವಿಸನಿನಿ ರವರನ್ನು ನೋಡಲ್ ಅಧಿಕಾರಿಯನ್ನಾಗಿ ಉಲ್ಲೇಖ(2) ರಲ್ಲಿ ನೇಮಿಸಲಾಗಿದೆ.
- ಮುಂದುವರೆದು ವಲಯ ಮಟ್ಟದಲ್ಲಿ ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಹೆಚ್.ಟಿ ಗ್ರಾಹಕರ ಜೊತೆ ಸಭೆಯನ್ನು ಕರೆದು ವಿದ್ಯುತ್ ಸರಬರಾಜು ಸಂಬಂಧಿತ ವಿಷಯಗಳನ್ನು ಚರ್ಚಿಸಿ ಸಭಾನಡಾವಳಿಗಳು ಹಾಗೂ ನಿಗದಿತ ನಮೂನೆಗಳನ್ನು ಘನ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡ ಆದೇಶ ಹೊರಡಿಸಿದೆ:

## ಅಧಿಕೃತ ಜ್ಞಾಪನಾ

**ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ(ಎಂಐಎಸ್)/2020-21/** cys-722 **ದಿನಾಂಕ :** -5 SEP 2020

1. ವಲಯ ವ್ಯಾಪ್ತಿಯಲ್ಲಿನ ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಹೆಚ್.ಟಿ ಗ್ರಾಹಕರ ವಿದ್ಯುತ್ ಸರಬರಾಜು ಸಂಬಂಧಿತ ವಿಷಯಗಳನ್ನು ಮೇಲ್ವಿಚಾರಣೆ ನಡೆಸಲು "High Value Consumers Monitoring Cell" ಸ್ಥಾಪಿಸಿ, ಸದರಿ Monitoring Cell ಗೆ **ಮುಖ್ಯ ಇಂಜಿನಿಯರ್(ವಿ), ಕಾ & ಪಾ ವಲಯ, ಮೈಸೂರು/ಹಾಸನ ಚಾವಿಸನಿನಿ** ರವರನ್ನು ವಲಯ ಮಟ್ಟದ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.
2. ಪ್ರತಿ ಮಾಹೆ ದಿನಾಂಕ 10 ರೊಳಗಾಗಿ ನಿಗದಿತ ನಮೂನೆಗಳಲ್ಲಿ ಮಾಹಿತಿಯನ್ನು ತಪ್ಪದೇ ಸಲ್ಲಿಸುವುದು.

3. ಪ್ರತಿ ದ್ವೈ-ಮಾಸಿಕ ಸಭೆಯನ್ನು ಕರೆದು High Value ಗ್ರಾಹಕರ ಜೊತೆ ವಿದ್ಯುತ್ ಸರಬರಾಜು ಸಂಬಂಧಿತ ವಿಷಯಗಳನ್ನು ಚರ್ಚಿಸುವುದು, ಅಹವಾಲುಗಳನ್ನು ಸ್ವೀಕರಿಸುವುದು, ಚಾವಿಸನಿನಿ/ಕವಿಪ್ರನಿನಿಯ ಕಡೆಯಿಂದ ಕೈಗಾರಿಕಾ ಪ್ರದೇಶದ ಗ್ರಾಹಕರಿಗೆ

   ಉಂಟಾಗುವ ವಿದ್ಯುತ್ ಸಮಸ್ಯೆ ಬಗ್ಗೆ ಹಾಗೂ ವಿದ್ಯುತ್ ಅಡಚಣೆಗಳ ಬಗ್ಗೆ ವಿಶ್ಲೇಷಿಸುವುದು ಹಾಗೂ ತ್ವರಿತವಾಗಿ ಸೂಕ್ತ ಕ್ರಮ ಕೈಗೊಳ್ಳುವುದು ಮತ್ತು ಕೈಗೊಂಡ ಕ್ರಮದ ವರದಿಯನ್ನು ನಿಗಮ ಕಛೇರಿಗೆ ಸಲ್ಲಿಸುವುದು.
4. ಸದರಿ ಸಭಾನಡಾವಳಿಗಳು ಹಾಗೂ ನಿಗದಿತ ನಮೂನೆಗಳನ್ನು ನಿಗಮ ಕಛೇರಿಗೆ ತಪ್ಪದೇ ಸಲ್ಲಿಸುವುದು.

5/9

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.

ಪ್ರತಿಗಳು:

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಪರೇಷನ್ಸ್), ನಿಗಮ ಕಛೇರಿ, ಬೆವಿಕಂ, ಬೆಂಗಳೂರು.
2. ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ ಚಾವಿಸನಿನಿ, ಮೈಸೂರು/ಹಾಸನ.
3. ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ, ಮೈಸೂರು
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ ವೃತ್ತ, ಚಾವಿಸನಿನಿ
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾವಿಸನಿನಿ
6. ಉಪ ಪ್ರಧಾನ ವ್ಯವಸ್ಥಾಪಕರು (ಎಂ.ಐಎಸ್), ನಿಗಮ ಕಛೇರಿ, ಚಾವಿಸನಿನಿ, ಮೈಸೂರು, ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು
7. ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು ರವರಿಗೆ ವ್ಯವಸ್ಥಾಪಕ ನಿರ್ದೇಶಕರು, ಚಾವಿಸನಿನಿ ರವರ ಗಮನಕ್ಕೆ ತರಲು ಕೋರಿದೆ
8. ತಾಂತ್ರಿಕ ಸಹಾಯಕರು, ನಿರ್ದೇಶಕರು(ತಾಂತ್ರಿಕ), ಚಾವಿಸನಿನಿ, ರವರಿಗೆ ನಿರ್ದೇಶಕರು(ತಾಂತ್ರಿಕ), ಚಾವಿಸನಿನಿ ರವರ ಗಮನಕ್ಕೆ ತರಲು ಕೋರಿದೆ

   ಮುಖ್ಯ ಕಡತ/ ಕಛೇರಿ ಪ್ರತಿ.